**ಕರ್ನಾಟಕ ರಾಜ್ಯಪತ್ರ**

**ಇಂಧನ ಸಚಿವಾಲಯ**

**No EN 147 FEB 2018, Bengaluru, dated 10.07.2018**

ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999 (1999ರ ಕರ್ನಾಟಕ ಅಧಿನಿಯಮ 25) ರ 57ನೇ ಪರಿಚ್ಛೇದದ ಉಪಕಲಮು (1) ರ ಅಗತ್ಯತೆಯಂತೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಅಧ್ಯಕ್ಷರು ಮತ್ತು ಇತರೆ ಸದಸ್ಯರ, ಸಂಭಾವನೆ, ಭತ್ಯೆಗಳು ಮತ್ತು ಸೇವಾ ಷರತ್ತುಗಳು) (ತಿದ್ದುಪಡಿ) ನಿಯಮಗಳು, 2000 ರ ಆ ಮೂಲಕ ಎಲ್ಲಾ ಬಾಧಿತ ವ್ಯಕ್ತಿಗಳ ಮಾಹಿತಿಗಾಗಿ ಕರಡನ್ನು ಪ್ರಕಟಿಸಿದ್ದು, ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳ ನಂತರ ಈ ಕರಡನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದು ಎಂದು ಸೂಚನೆ ನೀಡಲಾಗಿದೆ.

ಅದೇ ರೀತಿ, ಸದರಿ ರಾಜ್ಯಪತ್ರವನ್ನು 21ನೇ ಜೂನ್ 2018 ದಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲಾಯಿತು, ಆದರೂ ಸದರಿ ಕರಡು ಪ್ರಕಟಣೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದಲ್ಲಿ ಯಾವುದೇ ಆಕ್ಷೇಪಣೆ ಮತ್ತು ಸಲಹೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಆದುದರಿಂದ ಈಗ, ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999 (1999ರ ಕರ್ನಾಟಕ ಅಧಿನಿಯಮ 25) ರ 57ನೇ ಪರಿಚ್ಛೇದದಲ್ಲಿ ತನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಅಧ್ಯಕ್ಷರು ಮತ್ತು ಇತರೆ ಸದಸ್ಯರ, ಸಂಭಾವನೆ, ಭತ್ಯೆಗಳು ಮತ್ತು ಸೇವಾ ಷರತ್ತುಗಳು) ನಿಯಮಗಳು, 2000 ದಲ್ಲಿ, ಮುಂದುವರಿದಂತೆ ಈ ಕೆಳಗಿನ ತಿದ್ದುಪಡಿಗಳನ್ನು ರಚಿಸಿದೆ, ಅವುಗಳೆಂದರೆ: -

1) **ಶೀರ್ಷಿಕೆ ಮತ್ತು ಆರಂಭ** -
   i. ಈ ನಿಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಅಧ್ಯಕ್ಷರು ಮತ್ತು ಇತರೆ ಸದಸ್ಯರ, ಸಂಭಾವನೆ, ಭತ್ಯೆಗಳು ಮತ್ತು ಸೇವಾ ಷರತ್ತುಗಳು) (ತಿದ್ದುಪಡಿ) ನಿಯಮಗಳು, 2018 ಎಂದು ಕರೆಯಲಾಗುತ್ತದೆ.
   ii. ಜನವರಿ 2016ರ ಮೊದಲ ದಿನದಿಂದ ಅವು ಜಾರಿಗೆ ಬಂದಿರುತ್ತವೆ ಎಂದು ಪರಿಗಣಿಸಲಾಗುತ್ತದೆ.
2) **ನಿಯಮ 3ರ ತಿದ್ದುಪಡಿ** - ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಅಧ್ಯಕ್ಷರು ಮತ್ತು ಇತರೆ ಸದಸ್ಯರ, ಸಂಭಾವನೆ, ಭತ್ಯೆಗಳು ಮತ್ತು ಸೇವಾ ಷರತ್ತುಗಳು) ನಿಯಮಗಳು 2000ದ, (ಇನ್ನು ಮುಂದೆ ಸದರಿ ನಿಯಮ ಎಂದು ಉಲ್ಲೇಖಿಸಲ್ಪಡುತ್ತದೆ) ನಿಯಮ 3ರ -
   i. ಉಪ-ನಿಯಮ (1)ರಲ್ಲಿ "ಪ್ರತಿ ತಿಂಗಳಿಗೆ ಎಂಬತ್ತು ಸಾವಿರ ರೂಪಾಯಿ" ಎಂಬ ಪದಗಳನ್ನು "ಪ್ರತಿ ತಿಂಗಳಿಗೆ ಎರಡು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿ" ಎಂಬ ಪದಗಳಿಂದ ಪ್ರತಿಸ್ಥಾಪಿಸತಕ್ಕದ್ದು.
   ii. ಉಪ-ನಿಯಮ (2) ರಲ್ಲಿ, "ರೂ.8,000" ಎಂಬ ಅಂಕಿ ಮತ್ತು ಸಂಖ್ಯೆಗಳನ್ನು "ರೂ.22,500" ಎಂಬ ಅಂಕಿ ಮತ್ತು ಸಂಖ್ಯೆಗಳಿಂದ ಬದಲಾಯಿಸಿ ಅನುಕ್ರಮವಾಗಿ ಸೇರಿಸತಕ್ಕದ್ದು.

3) **ನಿಯಮ 6ರ ತಿದ್ದುಪಡಿ -**

i. ಷರತ್ತು (ಎ)ರಲ್ಲಿ "ರೂ.21,945" ಮತ್ತು "ರೂ.2,19,450" ಎಂಬ ಅಂಕಿ ಮತ್ತು ಸಂಖ್ಯೆಗಳನ್ನು "ರೂ.60,788" ಮತ್ತು "ರೂ.6,07,875" ಎಂಬ ಅಂಕಿ ಮತ್ತು ಸಂಖ್ಯೆಗಳಿಂದ ಬದಲಾಯಿಸಿ ಅನುಕ್ರಮವಾಗಿ ಸೇರಿಸತಕ್ಕದ್ದು.

ii. ಷರತ್ತು (ಬಿ)ರಲ್ಲಿ "ರೂ.17,175," ಮತ್ತು "ರೂ.1,71,750" ಎಂಬ ಅಂಕಿ ಮತ್ತು ಸಂಖ್ಯೆಗಳನ್ನು "ರೂ.48,262" ಮತ್ತು "ರೂ.4,82,620" ಎಂಬ ಅಂಕಿ ಮತ್ತು ಸಂಖ್ಯೆಗಳಿಂದ ಬದಲಾಯಿಸಿ ಅನುಕ್ರಮವಾಗಿ ಸೇರಿಸತಕ್ಕದ್ದು.

iii. ಷರತ್ತು (ಸಿ)ರಲ್ಲಿ "ರೂ. 17,175," ಮತ್ತು "ರೂ. 21,945" ಎಂಬ ಅಂಕಿ ಮತ್ತು ಸಂಖ್ಯೆಗಳನ್ನು "ರೂ. 48,262" ಮತ್ತು "ರೂ. 60,788" ಅಂಕಿ ಮತ್ತು ಸಂಖ್ಯೆಗಳಿಂದ ಬದಲಾಯಿಸಿ ಅನುಕ್ರಮವಾಗಿ ಸೇರಿಸತಕ್ಕದ್ದು.

ಕರ್ನಾಟಕದ ರಾಜ್ಯಪಾಲರ ಪರವಾಗಿ ಹಾಗೂ ಆದೇಶದ ಮೇರೆಗೆ,

**ಬಿ ವಿ ಶ್ರೀನಿವಾಸಯ್ಯ**

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ.